**3** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು

ಸಿ.ಸಿ.ನಂ.**2302/2022**
ದಿನಾಂಕಃ **06.02.2023**

ಪಿರ್ಯಾದಿ ಃ ಹೆಚ್.ಎಲ್.ರಾಜಪ್ಪ
ಬಿನ್ ಲೇಟ್ ಲೋಕೇಶಪ್ಪ,
ಸುಮಾರು 42 ವರ್ಷ,
ವ್ಯವಸಾಯಗಾರರು,
ವಾಸಃ ಕೆ.ಇ.ಬಿ. ಆಫೀಸ್ ಹತ್ತಿರ,
ಹಿರೇನಲ್ಲೂರು ಗ್ರಾಮ, ಹಿರೇನಲ್ಲೂರು ಹೋಬಳಿ,
ಕಡೂರು ತಾಲ್ಲೂಕು.

ವಿರುದ್ಧ

ಆರೋಪಿ ಃ ಬಿ.ಎಂ.ಕರಿಯಪ್ಪ
ಬಿನ್ ಮಲ್ಲಪ್ಪ,
ಸುಮಾರು 59 ವರ್ಷ,ಮುಖ್ಯೋಪಾಧ್ಯಾಯರು,
ವಾಸಃ ಬೇಗೂರು ಗ್ರಾಮ, ಅಜ್ಜಂಪುರ ಹೋಬಳಿ,
ಅಜ್ಜಂಪುರ ತಾಲ್ಲೂಕು,
ಹಾಲಿ ವಾಸಃ ಬಿ.ಎಂ.ಕರಿಯಪ್ಪ,
ಮುಖ್ಯೋಪಾಧ್ಯಾಯರು,
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅಂತರಗಟ್ಟೆ
ಅಜ್ಜಂಪುರ ತಾಲ್ಲೂಕು, ಅಜ್ಜಂಪುರ.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ **251** ರ ಅಡಿಯಲ್ಲಿ ಆರೋಪಣಾ ಸಾರಾಂಶಃ

ಆರೋಪಿಯಾದ ನೀವು ಕುಟುಂಬದ ದರ್ದು ಅಂದರೆ ಗೃಹಕೃತ್ಯದ ಉದ್ದೇಶವಾಗಿ ತುರ್ತು ಹಣದ ಅವಶ್ಯಕತೆ ಇದ್ದ ಕಾರಣ ದಿನಾಂಕ 02.04.2022 ರಂದು ಸಾಲದ ಮೊತ್ತವನ್ನು ತೀರುವಳಿ ಮಾಡಲು ಫಿರ್ಯಾದುದಾರರಿಂದ ರೂ.4,00,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಹಣದ ಮರುಪಾವತಿಗಾಗಿ ನೀವು ದಿನಾಂಕ 03.06.2022 ರಂದು ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಅಂತರಘಟ್ಟೆ ಶಾಖೆಯ ಚೆಕ್

ಸಂಖ್ಯೆ 039274 ಅನ್ನು ರೂ.4,00,000/- ಗಳಿಗೆ ಪಿರ್ಯಾದುದಾರರಿಗೆ ಬರೆದು ಕೊಟ್ಟಿದ್ದು, ಅದನ್ನು ಫಿರ್ಯಾದುದಾರರು ಅವರ ಖಾತೆ ಇರುವ ಕೆನರಾ ಬ್ಯಾಂಕ್, ಹಿರೇನಲ್ಲೂರು ಶಾಖೆಯ ಮೂಲಕ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕೆ ಸದರಿ ಚೆಕ್ ಅಮಾನ್ಯಗೊಂಡು ಬ್ಯಾಂಕಿನ ಹಿಂಬರಹದೊಂದಿಗೆ ವಾಪಾಸಾಗಿದ್ದು, ಈ ಬಗ್ಗೆ ಫಿರ್ಯಾದುದಾರರು ಅವರ ವಕೀಲರ ಮೂಲಕ ನಿಮಗೆ ದಿನಾಂಕ 10.06.2022 ರಂದು ನೋಟಿಸನ್ನು ಜಾರಿಗೊಳಿಸಿದ್ದು, ಸದರಿ ನೋಟಿಸು ನಿಮಗೆ ದಿನಾಂಕ 15.06.2022 ರಂದು ಜಾರಿಯಾಗಿದ್ದು, ಸದರಿ ನೋಟೀಸಿಗೆ ನೀವು ಸುಳ್ಳು ಉತ್ತರವನ್ನು ನೀಡಿ ಚೆಕ್ಕಿನ ಹಣವನ್ನು ಮರುಪಾವತಿಸಿರುವುದಿಲ್ಲ, ಆದುದರಿಂದ ನೀವು ನೆಗೋಷಿಯೇಬಲ್ ಇನ್ಸ್ಟ್ರುಮೆಂಟ್ಸ್ ಕಾಯ್ದೆಯ ಕಲಂ **138** ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಪ್ರಶ್ನೆ-1ಃ ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ ಹೌದು.

ಪ್ರಶ್ನೆ-2ಃ ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ?

ಉತ್ತರಃ ಇಲ್ಲ, ವಿಚಾರಣೆಯಾಗಬೇಕು.

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಿ/-
(ಸವಿತರಾಣಿ ಹೆಚ್.ವಿ)
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕಡೂರು.

ಆರೋಪಿ ಸಹಿಃ